KARN010009062026

| | | |
|---|---|---|
| Presented on | : | 05-05-2026 |
| Registered on | : | 05-05-2026 |
| Decided on | : | 06-06-2026 |
| Duration | : | 1 month 2 days |

## ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ.

**:ಉಪಸ್ಥಿತರು:**

ಶ್ರೀಯುತ ಎಂ.ಹೆಚ್. ಅಣ್ಣಯ್ಯನವರ, ಬಿಕಾಂ.ಎಲ್.ಎಲ್.ಬಿ. (ವಿಶೇಷ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಮನಗರ.

M H ANNAYYANAVAR
Digitally signed by M H ANNAYYANAVAR
Date: 2026.06.06 12:20:28 +0530

**ದಿನಾಂಕ 6 ನೇ ಜೂನ್ ಮಾಹೆ 2026**

**ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ 327/2026 C/W. ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ 328/2026 ಮತ್ತು 362/2026**

**ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ 327/2026 ರಲ್ಲಿನ**

**ಅರ್ಜಿದಾರರು (ಆರೋಪಿತರು)** : 1. ಶ್ರೀ ಆನಂದ್.ಪಿ.,
ಬಿನ್ ಪೆರಮಾಳ್ ಪಿ.,
ವಯಸ್ಸು 50 ವರ್ಷ.
ವಾಸಃ ನಂ.61/12, ದೊಡ್ಡಿಪಾಳ್ಯ ರಸ್ತೆ,
ಕಾಮಯ್ಯನಪಾಳ್ಯ ಅರಳಿಮರದ ಹತ್ತಿರ,
ಕಿಮ್ಮಾಳಗೂಡು, ಗೊಲ್ಲಹಳ್ಳಿ,
ಬೆಂಗಳೂರು ದಕ್ಷಿಣ – 60.

2. ಶ್ರೀ ಸಿ.ಕೆ.ಆನಂದ್,
ಬಿನ್ ಕೃಷ್ಣೇಗೌಡ,
ವಯಸ್ಸು 44 ವರ್ಷ.
ವಾಸಃ ನಂ.197, ಡಾ.ಅಂಬೇಡ್ಕರ್ ನಗರ,
ಕಬ್ಬಾಳಮ್ಮಪಾಳ್ಯ, ಕುಂಬಳಗೂಡು, ಕೆಂಗೇರಿ,

ಬೆಂಗಳೂರು ದಕ್ಷಿಣ – 74.
**(**ಪರವಾಗಿ ಶ್ರೀ**.**ಕಾಂತರಾಜು**.**ವೈ**.**ಎಸ್**.,** ವಕೀಲರು**)**

<u>ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ **328/2026** ರಲ್ಲಿನ</u>

<u>ಅರ್ಜಿದಾರರು</u> **:** ಶ್ರೀ ಹೆಚ್.ಎಂ.ಮೋಹನ್,
<u>(ಆರೋಪಿ**)**</u>
ಬಿನ್ ಹೆಚ್.ಎನ್.ಮುನಿವೆಂಕಟರಾಯಪ್ಪ,
ವಯಸ್ಸು 45 ವರ್ಷ.
ವಾಸಃ ನಂ.319/126/10 ಎ, ಹೆಮ್ಮಿಗೆಪುರ ಗ್ರಾಮ,
ಕೆಂಗೇರಿ, ವಿ.ಟಿ.ಸಿ - ಹೆಮ್ಮಿಗೆಪುರ,
ಪಿ.ಓ.- ಚುದೇನಪುರ,
ಬೆಂಗಳೂರು ಗ್ರಾಮಾಂತರ ಜಿಲ್ಲೆ – 560060.
**(**ಪರವಾಗಿ ಶ್ರೀ**.**ಅಂಜನಾ ರೆಡ್ಡಿ**.**ಎ**.,** ವಕೀಲರು**)**

<u>ಕ್ರಿಮಿನಲ್ ಮಿಸಲೇನಿಯಸ್ ಸಂಖ್ಯೆ **362/2026** ರಲ್ಲಿನ</u>

<u>ಅರ್ಜಿದಾರರು</u> **:** ಶ್ರೀ ಕನ್ನಡ ಪ್ರಕಾಶ್ ಉಃ ಕೆ.ಜಿ.ಕನ್ನಡಪ್ರಕಾಶ್,
<u>(ಆರೋಪಿ**)**</u>
ಬಿನ್ ಗಂಗಯ್ಯ,
ವಯಸ್ಸು 49 ವರ್ಷ.
ವಾಸಃ ನಂ.167, 3 ನೇ ಅಡ್ಡ ರಸ್ತೆ,
2 ನೇ ಮುಖ್ಯರಸ್ತ, ಬಾಪೂಜಿನಗರ,
ಮೈಸೂರು ರಸ್ತೆ, ಬೆಂಗಳೂರು ದಕ್ಷಿಣ,
ಬೆಂಗಳೂರು ಜಿಲ್ಲೆ – 560026.
**(**ಪರವಾಗಿ ಶ್ರೀ**.**ಅರುಣ್ ಕುಮಾರ್**,** ವಕೀಲರು**)**

**-** ವಿರುದ್ಧ **-**

<u>ಎದುರುದಾರರು**:**</u> ಸರ್ಕಾರದ ಪರವಾಗಿ ತಾವರೆಕೆರೆ ಪೊಲೀಸ್ ಠಾಣೆ,
ಬೆಂಗಳೂರು ದಕ್ಷಿಣ ಜಿಲ್ಲೆ.
**(**ಪರವಾಗಿ ಸರ್ಕಾರಿ ಅಭಿಯೋಜಕರು**)**

*****

## ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ರಡಿ ಜಾಮೀನು ಅರ್ಜಿಯ ಮೇಲೆ ಆದೇಶ

ಅರ್ಜಿದಾರರ ಪರ ವಕೀಲರು ಮಾನ್ಯ ನ್ಯಾಯಾಲಯದಲ್ಲಿ ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ರ ಅಡಿಯಲ್ಲಿ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಸಲ್ಲಿಸಿ, ತಾವರೆಕೆರೆ ಪೊಲೀಸ್ ಠಾಣಾಧಿಕಾರಿಯವರು ಅರ್ಜಿದಾರ ಯಾವುದೇ ರೀತಿಯ ಅಪರಾಧ ಮಾಡಿಲ್ಲದಿದ್ದರೂ ಸಹಿತ ಅರ್ಜಿದಾರರ ವಿರುದ್ಧ ಸುಳ್ಳು ಪ್ರಕರಣ ದಾಖಲು ಮಾಡಿದ್ದು, ಅರ್ಜಿದಾರರು ನ್ಯಾಯಾಲಯಕ್ಕೆ ಸೂಕ್ತ ಜಾಮೀನು ನೀಡಲು ತಯಾರಿದ್ದು ಹಾಗೂ ನ್ಯಾಯಾಲಯ ವಿಧಿಸುವ ಷರತ್ತುಗಳನ್ನು ಪಾಲಿಸಲು ತಯಾರಿರುತ್ತಾರೆಂದು, ಆದ್ದರಿಂದ ಅರ್ಜಿದಾರರು ಸಲ್ಲಿಸಿರುವ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಮಂಜೂರು ಮಾಡಬೇಕೆಂದು ವಿನಂತಿಸಿಕೊಂಡಿರುತ್ತಾರೆ.

2. ಸದರಿ ಅರ್ಜಿಗೆ ಸರ್ಕಾರಿ ಅಭಿಯೋಜಕರು ತಕರಾರು ಸಲ್ಲಿಸಿ, ಅರ್ಜಿದಾರರ ಮೇಲೆ ಇರತಕ್ಕಂತಹ ಆಪಾದನೆ ಜಾಮೀನು ರಹಿತವಾದಂತಹ ಆಪಾದನೆಯಾಗಿರುತ್ತದೆ. ಅರ್ಜಿದಾರರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿದಲ್ಲಿ ಪುನಃ ಇಂತಹದೇ ಕೃತ್ಯ ಎಸಗುವ ಸಾಧ್ಯತೆ ಇರುತ್ತದೆ ಹಾಗೂ ತನಿಖೆಗೆ ಸಹಕರಿಸದೇ ಸಾಕ್ಷ್ಯಾಧಾರಗಳನ್ನು ನಾಶಪಡಿಸುವ, ಸಾಕ್ಷಿದಾರರಿಗೆ ಬೆದರಿಸುವ ತನಿಖೆಗೆ ಅಡ್ಡಿಯುಂಟು ಮಾಡುವ ಸಾಧ್ಯತೆ ಇರುತ್ತದೆ ಎಂದು, ಈ ಮೇಲ್ಕಂಡ ಕಾರಣಗಳಿಂದಾಗಿ ನಿರೀಕ್ಷಣಾ ಜಾಮೀನು ಅರ್ಜಿಯನ್ನು ತಿರಸ್ಕರಿಸಬೇಕೆಂದು ಕೇಳಿಕೊಂಡಿದ್ದಾರೆ.

3. ಅರ್ಜಿ, ತಕರಾರು ಹಾಗೂ ಉಭಯ ವಕೀಲರ ವಾದ ವಿವಾದವನ್ನು ಪರಿಶೀಲಿಸಲಾಗಿ, ಮಾನ್ಯ ನ್ಯಾಯಾಲಯಕ್ಕೆ ಈ ಕೆಳಕಂಡ ಅಂಶಗಳು ಚರ್ಚೆಗೆ ಬಂದಿರುತ್ತವೆ:-

1. ಅರ್ಜಿದಾರರ ಪರ ವಕೀಲರು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ರಡಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಬಹುದೇ ?

2. ಯಾವ ಆದೇಶ ?

4. ಮೇಲ್ಕಂಡ ಅಂಶಗಳಿಗೆ ನನ್ನ ಉತ್ತರ ಈ ಕೆಳಕಂಡಂತೆ ಇರುತ್ತದೆ.

| | | |
|---|---|---|
| ಅಂಶ ನಂ.1 | : | ಸಕಾರಾತ್ಮಕವಾಗಿ |
| ಅಂಶ ನಂ.2 | : | ಅಂತಿಮ ಆದೇಶದಂತೆ ಈ ಕೆಳಕಂಡ ಕಾರಣಗಳಿಗಾಗಿ**:** |

## <u>ಕಾರಣಗಳು</u>

5. <u>ಅಂಶ ಸಂಖ್ಯೆ **1:**</u> ಪಿರ್ಯಾದುದಾರರು ಕೊಟ್ಟ ದೂರಿನಂತೆ ತಾವರೆಕೆರೆ ಪೊಲೀಸ್ ಠಾಣಾಧಿಕಾರಿಗಳು ಅರ್ಜಿದಾರರ ವಿರುದ್ಧ ತಾವರೆಕೆರೆ ಪೊಲೀಸ್ ಠಾಣಾ ಅಪರಾಧ ಸಂಖ್ಯೆ 117/2026 ಭಾರತೀಯ ದಂಡ ಸಂಹಿತೆ ಕಲಂ.417, 420 ರ ಅಡಿಯಲ್ಲಿ ಪ್ರಕರಣ ದಾಖಲು ಮಾಡಿರುತ್ತಾರೆ.

6. <u>ಪ್ರಕರಣದ ಸಂಕ್ಷಿಪ್ತ ಸಾರಾಂಶ**:**</u> ದೂರನ್ನು ಪರಿಶೀಲಿಸಲಾಗಿ, ಚಿಕ್ಕೆಲೂರು ಗ್ರಾಮದ ಸರ್ವೆ ನಂ.49 ರಲ್ಲಿನ ಜಮೀನಿನಲ್ಲಿ ಕೆಂಪೇಗೌಡ ಯೂತ್ ಪೌಂಡೇಷನ್ ಟ್ರಸ್ಟ್ ರಿ. ವತಿಯಿಂದ 2023 ಏಪ್ರಿಲ್ ತಿಂಗಳಿನಿಂದ ಡಿಸೆಂಬರ್ ತಿಂಗಳಿನವರೆಗೆ ನಾನು ಮತ್ತು ನನ್ನ ಸಂಬಂಧಿಕರು ಕನ್ನಡ ಪ್ರಕಾಶ್ ಎಂಬುವವರಿಗೆ ಒಟ್ಟು ರೂ.12,85,000/- ಹಣವನ್ನು

ಹಾಗೂ ಮೋಹನ್ ಎಂಬುವವರಿಗೆ ಒಟ್ಟು ರೂ.33,62,500/- ಹಣವನ್ನು ನೀಡಿ ನಿವೇಶನಗಳನ್ನು ಖರೀದಿಸಿರುತ್ತಾರೆ, ನಂತರ ವಿಚಾರ ಮಾಡಲಾಗಿ ಅವರು ಖರೀದಿಸಿದ ನಿವೇಶನಗಳು ಇರುವ ಜಮೀನು ಗೋಮಾಳ ಜಮೀನಾಗಿರುತ್ತದೆ ಎಂದು ತಿಳಿದು ಬಂದಿದ್ದು, ಗೋಮಾಳ ಜಮೀನನ್ನು ನಿವೇಶನಗಳನ್ನಾಗಿ ಮಾಡಿ ಪಿರ್ಯಾದಿ ಹಾಗೂ ಇತರರಿಗೆ ಮಾರಾಟ ಮಾಡಿ ಹಣವನ್ನು ಪಡೆದು ಮೋಸ ಮಾಡಿರುತ್ತಾರೆ. ಈ ಕಾರಣದಿಂದ ಪಿರ್ಯಾದಿ ಅರ್ಜಿದಾರರ ವಿರುದ್ಧ ಎದುರುದಾರ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟಿರುತ್ತಾರೆ.

7. ಅರ್ಜಿದಾರರ ಮೇಲೆ ಇರುವಂತ ಆಪಾದನೆ ಜಾಮೀನು ರಹಿತವಾದಂತಹ ಆಪಾದನೆ ಆಗಿದ್ದರೂ ಸಹಿತ ಜೀವವಾಧಿ ಶಿಕ್ಷೆ ಮತ್ತು ಮರಣ ದಂಡನೆ ವಿಧಿಸತಕ್ಕಂತಹ ಆಪಾದನೆ ಆಗಿರುವುದಿಲ್ಲ ಮತ್ತು ಮಾನ್ಯ ದಂಡಾಧಿಕಾರಿಗಳ ನ್ಯಾಯಾಲಯದಲ್ಲಿ ವಿಚಾರಣೆ ಮಾಡುವಂತಹ ಆಪಾದನೆ ಆಗಿರುತ್ತದೆ.

8. ದೂರನ್ನು ಪರಿಶೀಲಿಸಲಾಗಿ, 2023 ರಲ್ಲಿ ದೂರುದಾರರು ಅರ್ಜಿದಾರರಿಗೆ ಹಣ ಕೊಟ್ಟಿರುತ್ತೇವೆ ಅಂತಾ ಹೇಳಿದ್ದು, ಸದರಿ ಜಮೀನು ಗೋಮಾಳ ಜಮೀನು ಇರುತ್ತದೆ ಅಂತಾ ಗೊತ್ತಿದ್ದು, ಹಣ ಪಡೆದು ನೋಂದಣಿ ಕ್ರಯಪತ್ರ ಮಾಡಿಕೊಡದೇ ಮೋಸ ಮಾಡಿರುತ್ತಾರೆ ಅಂತಾ ಹೇಳಿದ್ದು, ಆದರೆ ಮೂರು ವರ್ಷದ ಆದ ನಂತರ ದೂರು ಕೊಟ್ಟಿರುವುದರಿಂದ, ಮೂರು ವರ್ಷ ತಡವಾಗಿ ದೂರು ಕೊಡಲು ಕಾರಣ ಏನು ಎಂಬುದರ ಬಗ್ಗೆ ಸಮಂಜಸವಾದ ಕಾರಣಗಳನ್ನು ನೀಡಿರುವುದಿಲ್ಲ.

9. ಪಿರ್ಯಾದಿ ಮತ್ತು ಅವರ ಸಹೋದರಿ ಹಾಗೂ ಸ್ನೇಹಿತರು ಎಲ್ಲಾ ಸೇರಿಕೊಂಡು 17 ನಿವೇಶನಗಳನ್ನು ಕೊಡಿಸಲಾಗಿದೆ ಅಂತಾ ಬರೆದಿದ್ದು, ಒಂದು ವೇಳೆ ಸದರಿ ಸ್ವತ್ತು ಗೋಮಾಳ ಜಮೀನು ಆಗಿದ್ದಲ್ಲಿ ಆ ಜಮೀನನ್ನು ಕೃಷಿಯೇತ್ತರ ಜಮೀನಾಗಿ ಪರಿವರ್ತನೆ ಮಾಡಲು ಬರಲಾರದು. ಆದರೂ ಸಹಿತ ಯಾವ ದಾಖಲೆಗಳ ಆಧಾರದ ಮೇಲೆ ನಿವೇಶನಗಳನ್ನು ಮಾಡಿರುತ್ತಾರೆ ಎಂಬುದರ ಬಗ್ಗೆ ಪಿರ್ಯಾದಿ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ.

10. ಅರ್ಜಿದಾರರಿಗೆ ಹಣ ಕೊಟ್ಟಿದ್ದರ ಬಗ್ಗೆ ದೂರಿನಲ್ಲಿ ನಮೂದಿಸಿದ್ದು, ಸದರಿ ಹಣವನ್ನು ಡಿಡಿ ಮುಖಾಂತರವೋ, ಚೆಕ್‌ನ ಮುಖಾಂತರವೋ ಅಥವಾ ಫೋನ್ ಪೇ ಮುಖಾಂತರ ಹಣ ಕೊಡಲಾಗಿದೆ ಅಂತಾ ದಾಖಲೆ ಹಾಜರುಪಡಿಸಿರುವುದಿಲ್ಲ. ಸದರಿ ಸ್ವತ್ತಿನಲ್ಲಿ ಅಂಗಡಿಯನ್ನು ಕಟ್ಟಿದ್ದು, ಕೆ.ಇ.ಬಿ.ಯಿಂದ ವಿದ್ಯುತ್ ಸಂಪರ್ಕ ಸಹಿತ ಪಡೆದುಕೊಂಡಿದ್ದರ ಬಗ್ಗೆ ಒಪ್ಪಿಕೊಂಡಿದ್ದು, ಅದಕ್ಕೆ ಸೂಕ್ತವಾದ ದಾಖಲೆ ಹಾಜರುಪಡಿಸಿಲ್ಲ. ತಹಶೀಲ್ದಾರ್ ಇವರು ಅಂಗಡಿಯನ್ನು ಕೆಡವಿದ್ದರ ಬಗ್ಗೆ ಫೋಟೋ ಹಾಜರುಪಡಿಸಿಲ್ಲ . ಸದರಿ ಜಮೀನು ಗೋಮಾಳ ಜಮೀನು ಇತ್ತು ಎಂಬುದರ ಬಗ್ಗೆ ದಾಖಲೆ ಹಾಜರುಪಡಿಸಿಲ್ಲ. ದೂರಿನಲ್ಲಿ ಹೇಳಿದಂಥ ಚಿಕ್ಕಲೂರು ಗ್ರಾಮದ ಸರ್ವೆ ನಂ.49 ಇದು ಗುರುವಯ್ಯ ಉಃ ಗುರುವಪ್ಪ, ಯಲ್ಲಮ್ಮ, ಯಲ್ಲಪ್ಪ, ಕುಮಾರ, ಶೋಭಾ ಇವರ ಹೆಸರಿನಲ್ಲಿ 2 ಎಕೆರೆ ಜಮೀನು ಇದ್ದು, ಫಾರಂ ನಂ.50 ಮತ್ತು 53 ಕೊಟ್ಟಿರುತ್ತಾರೆ ಅಂತಾ ತೋರಿಸಲು ದಾಖಲೆ ಹಾಜರುಪಡಿಸಿಲ್ಲ. ಆದ್ದರಿಂದ ಈ ಮೇಲ್ಕಂಡ ಎಲ್ಲಾ

ಕಾರಣಗಳಿಂದ ಅರ್ಜಿದಾರರು ಸದರಿ ಸ್ವತ್ತು ಗೋಮಾಳ ಜಮೀನು ಇರುತ್ತದೆ ಅಂತಾ ಗೊತ್ತಿದ್ದು, ಸರ್ಕಾರಕ್ಕೆ ಗೊತ್ತಿಲ್ಲದೇ ನಿವೇಶನಗಳನ್ನಾಗಿ ಮಾಡಿ ಸದರಿ ನಿವೇಶನಗಳು ಗೋಮಾಳ ಜಮೀನು ಇರುತ್ತದೆ ಅಂತಾ ಅರ್ಜಿದಾರರಿಗೆ ಗೊತ್ತಿದ್ದು, ಆ ವಿಷಯವನ್ನು ನಿವೇಶನ ಖರೀದಿ ಮಾಡಿದಂತಾ ಪಿರ್ಯಾದಿ ಮತ್ತು ಇತರರಿಗೆ ಗೊತ್ತುಪಡಿಸದೇ ಮಾರಾಟ ಮಾಡಿ ಪಿರ್ಯಾದಿಗೆ ಮೋಸ ಮಾಡಿರುತ್ತಾರೆ ಅಂತಾ ತೋರಿಸಲು ದಾಖಲೆ ಸಮೇತ ಪಿರ್ಯಾದಿ ವಿಫಲವಾಗಿದ್ದು ಹಾಗೂ ಸದರಿ ಪ್ರಕರಣ ಸಂಪೂರ್ಣ ಸಿವಿಲ್ ಸ್ವರೂಪದ ಪ್ರಕರಣವಾಗಿರುವುದರಿಂದ, ಅರ್ಜಿದಾರರ ವಿರುದ್ಧ ಈ ಹಿಂದೆ ಯಾವುದೇ ಪ್ರಕರಣಗಳು ದಾಖಲಾಗದೇ ಇರುವುದರಿಂದ, ಇಂಥ ಸಂದರ್ಭದಲ್ಲಿ ಅರ್ಜಿದಾರರು ಷರತ್ತಿನ ಆಧಾರದ ಮೇಲೆ ನಿರೀಕ್ಷಣಾ ಜಾಮೀನು ಪಡೆಯಲು ಅರ್ಹರಿರುತ್ತಾರೆ.

11. ಅರ್ಜಿದಾರರು ಹಾಲಿ ಬೆಂಗಳೂರು ದಕ್ಷಿಣ ಜಿಲ್ಲಾ ರಹವಾಸಿಯಾಗಿದ್ದು ಚರ ಮತ್ತು ಸ್ಥಿರ ಆಸ್ತಿಗಳನ್ನು ಹೊಂದಿದ್ದು ತಲೆ ಮರೆಸಿಕೊಳ್ಳುವ ಸಾಧ್ಯತೆ ಇರುವುದಿಲ್ಲ. ಇಂತಹ ಸಂದರ್ಭದಲ್ಲಿ ಮಾನ್ಯ ನ್ಯಾಯಾಲಯವು ಅರ್ಜಿದಾರರಿಗೆ ಷರತ್ತಿನ ಆಧಾರದ ಮೇಲೆ ನಿರೀಕ್ಷಣಾ ಜಾಮೀನನ್ನು ಮಂಜೂರು ಮಾಡುವುದು ಸೂಕ್ತ ಅಂತ ನ್ಯಾಯಾಲಯಕ್ಕೆ ಕಂಡುಬಂದಿರುವುದರಿಂದ ಸದರಿ ಅಂಶ ಸಂಖ್ಯೆ ***1*** ನ್ನು ಸಕಾರಾತ್ಮಕವಾಗಿ ಉತ್ತರಿಸಲಾಯಿತು.

12. <u>ಅಂಶ ಸಂಖ್ಯೆ **2**</u>**:** ಅಂಶ ಸಂಖ್ಯೆ 1 ಕ್ಕೆ ನೀಡಿದ ಕಾರಣ ಹಾಗೂ ಉತ್ತರಗಳಿಗಾಗಿ ಈ ಕೆಳಕಂಡಂತೆ ಆದೇಶ:

## ಆದೇಶ

ಅರ್ಜಿದಾರರ ಪರ ವಕೀಲರು ಭಾರತೀಯ ನಾಗರೀಕ ಸುರಕ್ಷಾ ಸಂಹಿತೆ ಕಲಂ 482 ಅಡಿಯಲ್ಲಿ ಸಲ್ಲಿಸಿದ ನಿರೀಕ್ಷಣಾ ಜಾಮೀನು ಅರ್ಜಿಯನ್ನು ಪುರಸ್ಕರಿಸಲಾಗಿದೆ.

ಒಂದು ವೇಳೆ ಎದುರುದಾರ ಪೊಲೀಸರು ಅರ್ಜಿದಾರರನ್ನು ದಸ್ತಗಿರಿ ಮಾಡಿದ್ದಲ್ಲಿ ಸದರಿ ಅರ್ಜಿದಾರರಿಂದ ರೂ.50,000/- (ಐವತ್ತು ಸಾವಿರ ರೂಪಾಯಿ) ಸ್ವ ಮುಚ್ಚಳಿಕೆ ಪತ್ರ ಹಾಗೂ ಅಷ್ಟೇ ಮೊತ್ತದ ಒಬ್ಬ ಸೂಕ್ತ ಜಾಮೀನುದಾರರನ್ನು ಪಡೆದುಕೊಂಡು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಆದೇಶಿಸಲಾಗಿದೆ ಹಾಗೂ ಅರ್ಜಿದಾರ ಈ ಕೆಳಕಂಡ ಷರತ್ತುಗಳನ್ನು ಪಾಲಿಸತಕ್ಕದ್ದು.

## ಷರತ್ತುಗಳು

1. ಅರ್ಜಿದಾರರು ತಮ್ಮ ವಿಳಾಸಕ್ಕೆ ಸಂಬಂಧಪಟ್ಟಂತೆ ಚುನಾವಣಾ ಗುರುತಿನ ಚೀಟಿ/ಆಧಾರ್ ಕಾರ್ಡ್ ಹಾಗೂ ಇತರೆ ದಾಖಲೆಯನ್ನು ಹಾಜರುಪಡಿಸತಕ್ಕದ್ದು.
2. ಅರ್ಜಿದಾರರು ಅಭಿಯೋಜಕ ಪಕ್ಷದ ಸಾಕ್ಷಿಗಳನ್ನು ಯಾವುದೇ ರೀತಿಯಿಂದಲೂ ಹೆದರಿಸತಕ್ಕದ್ದಲ್ಲ ಮತ್ತು ತನಿಖೆಗೆ ಸಹಕರಿಸತಕ್ಕದ್ದು.
3. ನ್ಯಾಯಾಲಯಕ್ಕೆ ತಪ್ಪದೇ ಎಲ್ಲಾ ವಿಚಾರಣೆ ದಿನಾಂಕ ದಂದು ಹಾಜರಿರತಕ್ಕದ್ದು.
4. ಅರ್ಜಿದಾರರು ಪುನಃ ಇಂತಹ ಪ್ರಕರಣಗಳಲ್ಲಿ ಭಾಗಿಯಾಗತಕ್ಕದ್ದಲ್ಲ.
5. ಅರ್ಜಿದಾರರು ಎದುರುದಾರ ಪೊಲೀಸ್ ಠಾಣೆಯಲ್ಲಿ ಪ್ರತಿ ಸೋಮವಾರ ಮಧ್ಯಾಹ್ನ 2 ರಿಂದ 5 ಗಂಟೆಯೊಳಗೆ ಎರಡು ತಿಂಗಳು ಹಾಜರಾತಿ ನೀಡತಕ್ಕದ್ದು.

6. ಆದೇಶ ಆದ 15 ದಿವಸದೊಳಗೆ ಅರ್ಜಿದಾರರು ಸಂಬಂಧಪಟ್ಟ ದಂಡಾಧಿಕಾರಿ ನ್ಯಾಯಾಲಯಕ್ಕೆ ಹಾಜರಾಗಿ ಜಾಮೀನು ಪಡೆಯಲು ಆದೇಶಿಸಲಾಗಿದೆ.

ಈ ಮೇಲ್ಕಂಡ ಷರತ್ತುಗಳನ್ನು ಉಲ್ಲಂಘನೆ ಮಾಡಿದಲ್ಲಿ ತಕ್ಷಣವೇ ಜಾಮೀನು ಅರ್ಜಿ ವಜಾ ಆಗತಕ್ಕದ್ದು ಅಂತಾ ಆದೇಶ ಮಾಡಲಾಗಿದೆ.

ಮೂಲ ಆದೇಶವನ್ನು ಕ್ರಿ.ಮಿಸ್.ನಂ.327/2026 ರಲ್ಲಿ ಇಡಬೇಕು ಹಾಗೂ ಅದರ ಪ್ರತಿಯನ್ನು ಕ್ರಿ.ಮಿಸ್.ನಂ.328/2026 ಮತ್ತು ಕ್ರಿ.ಮಿಸ್.ನಂ.362/2026 ರಲ್ಲಿ ಇಡಲು ಆದೇಶಿಸಲಾಯಿತು.

*(ಈ ಆದೇಶದ ಉಕ್ತಲೇಖನವನ್ನು ಶೀಘ್ರಲಿಪಿಗಾರ್ತಿ ಗ್ರೇಡ್ III ರವರಿಗೆ ನೇರವಾಗಿ ಗಣಕಯಂತ್ರ ಪರದೆಯ ಮೇಲೆ ನೀಡಿದ್ದು, ನಂತರ ಅವರು ಗಣಕೀಕರಿಸಿದ್ದನ್ನು ಓದಿ, ತಿದ್ದಿ ಇದೇ ದಿನಾಂಕ* ***6*** *ನೇ ಜೂನ್ ಮಾಹೆ* ***2026*** *ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).*

(ಎಂ.ಹೆಚ್.ಅಣ್ಣಯ್ಯನವರ)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ರಾಮನಗರ.